ನೋಡಿದೆ ಎಂದು ಫೇಸ್‌ಬುಕ್‌ನಲ್ಲಿ ಯಾರೋ ಬರೆದರು. ಆ ಪೋಸ್ಟ್ ಜತೆಗೆ ಒಂದು ಚಿತ್ರವನ್ನೂ ಹಾಕಿದ್ದರು. ಅದು ಐನೂರಕ್ಕೂ ಹೆಚ್ಚು ಸಲ ಶೇರ್ ಆಯಿತು. ಚಿತ್ರದಲ್ಲಿದ್ದವರು ಪ್ರಭುದೇವ ಅಲ್ಲ. ಮಾನಸಿಕ ರೋಗಿಯಂತೆ ಕಾಣುತ್ತಿದ್ದ ಬೇರೆ ಯಾರೋ. ಒಂದು ಆ್ಯಂಗಲ್‌ನಲ್ಲಿ ಪ್ರಭುದೇವರನ್ನು ಹೋಲುತ್ತಿದ್ದ.

ದಿನ ಕಳೆದಂತೆ ಪ್ರಭುದೇವರ ನಾಪತ್ತೆ ವಿಷಯದಲ್ಲಿ ವದಂತಿಗಳು ಮೇಲುಗೈ ಪಡೆದು ವಿಜೃಂಭಿಸಿದವು.

ಅವರನ್ನು ಶ್ರೀಶೈಲದಲ್ಲಿ ನೋಡಿದೆವು ಎಂದು ಕೆಲವರು ಯಾತ್ರಿಗಳು ಹೇಳಿದರೆಂದು ಪತ್ರಿಕೆಯೊಂದರಲ್ಲಿ ವರದಿಯಾಯಿತು. ಹದಿನೈದು ದಿನಗಳು ಕಳೆಯುವಷ್ಟರಲ್ಲಿ ಅವರು ಉಳವಿಯ ಜಾತ್ರೆಗೆ ಹೊರಟಿದ್ದ ಪಾದಯಾತ್ರಿಗಳ ಗುಂಪಿನಲ್ಲಿದ್ದರು! ಅವರನ್ನು ಮಾತಾಡಿಸುವ ಪ್ರಯತ್ನ ಮಾಡಿದೆವು. ಅವರು ಏನೂ ಹೇಳದೆ ನಡೆದುಹೋದರು ಎಂದು ಯಾರೋ ಸಾಮಾಜಿಕ ಜಾಲತಾಣದಲ್ಲಿ ಬರೆದರು. ಪ್ರೊ.ಪ್ರಭುದೇವ ಅವರು ಅಯೋಧ್ಯೆಯಲ್ಲಿದ್ದಾರೆ ಸನ್ಯಾಸ ದೀಕ್ಷೆ ಪಡೆದುಕೊಂಡಿದ್ದಾರೆ ಎಂದು ಮತ್ಯಾರೋ ಹೇಳಿದರು. ವಿಚಾರವಾದಿ, ಬಂಡಾಯ ಮನೋಧರ್ಮದ ಪ್ರಭುದೇವರ ಬಗ್ಗೆ ಮನಸ್ಸಿಗೆ ತೋಚಿದಂತೆ ಬರೆದು ಲಘುವಾಗಿ ಕಂಡ ವಿಕೃತ ಮನಸ್ಥಿತಿ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಯಿತು.

ಈ ನಡುವೆ ಮಠಾಧಿಪತಿಯೊಬ್ಬನ ಲೈಂಗಿಕ ಹಗರಣ ದೊಡ್ಡ ಮಟ್ಟದಲ್ಲಿ ಸುದ್ದಿಯಾಯಿತು. ಅದರ ಬೆನ್ನಲ್ಲೇ ಸಿನಿಮಾ ನಟಿಯೊಬ್ಬಳು ಕೊಲೆಯಾದಳು. ಐದು ರಾಜ್ಯಗಳ ವಿಧಾನಸಭೆಗೆ ನಡೆದ ಚುನಾವಣೆ ಫಲಿತಾಂಶ ಪ್ರಕಟವಾಯಿತು. ಅಕಾಲ ಮಳೆಯ ಅವಾಂತರಗಳು. ಅತಿಯಾದ ಚಳಿ, ರಾಜಕಾರಣಿಗಳ ಭ್ರಷ್ಟಾಚಾರ, ಕೊಲೆ, ಸುಲಿಗೆ, ಮಾನಭಂಗದ ಸುದ್ದಿಗಳು ಜನರ ಗಮನ ಬೇರೆಡೆಗೆ ಸೆಳೆದವು. ಕ್ರಮೇಣ ಪ್ರಭುದೇವ ಜನರ ಮನಸ್ಸಿನಿಂದ ದೂರವಾದರು.

ಆದರೆ ಪ್ರಭುದೇವರ ಓದುಗರು, ವಿದ್ಯಾರ್ಥಿಗಳು ಸುಮ್ಮನೆ ಕೂರಲಿಲ್ಲ. ಪ್ರೊಫೆಸರ್ ಅವರನ್ನು ಪತ್ತೆ ಮಾಡುವ ವಿಷಯದಲ್ಲಿ ಸರ್ಕಾರ ಉದಾಸೀನ ಧೋರಣೆ ತಾಳಿದೆ ಎಂದು ಆರೋಪಿಸಿ ಪ್ರತಿಭಟನೆಗೆ ಸಜ್ಜಾದರು. ಪ್ರಭುದೇವರ ಹುಟ್ಟೂರಿನಿಂದ ಸೈಕಲ್ ಜಾಥಾ ಆರಂಭಿಸಿ, ರಾಜಧಾನಿ ಗಡಿ ತಲುಪಿದ ನಂತರ ಅದನ್ನು ಜನಜಾಗೃತಿ ಪಾದಯಾತ್ರೆಯನ್ನಾಗಿ ಪರಿವರ್ತಿಸುವ ನಿರ್ಧಾರ ಮಾಡಿದರು.

ಮರೆತಿದ್ದ ಪ್ರಭುದೇವ ಅವರನ್ನು ರಾಜ್ಯದ ಜನರಿಗೆ ನೆನಪು ಮಾಡಿಕೊಡುವ ಪ್ರಯತ್ನ ಮಾಡುತ್ತಲೇ ಇದ್ದರು. ಸೈಕಲ್ ಜಾಥಾ ಮತ್ತು ಪಾದಯಾತ್ರೆಗೆ ರಾಷ್ಟ್ರೀಯ ಪಕ್ಷವೊಂದು ಬೆಂಬಲ ಘೋಷಿಸಿದ ನಂತರ ಪ್ರಭುದೇವ ಅವರ ನಾಪತ್ತೆ ಪ್ರಕರಣಕ್ಕೆ ರಾಷ್ಟ್ರಮಟ್ಟದಲ್ಲಿ ಪ್ರಚಾರ ಸಿಕ್ಕಿತು.

ಪ್ರಭುದೇವ ತಮ್ಮ ಕೊನೆಯ ಭಾಷಣದಲ್ಲಿ ದೇಶದ ಸರ್ಕಾರವನ್ನು ಕಟುವಾಗಿ ಟೀಕಿಸಿದ್ದರು. ಅವರನ್ನು ಸರ್ಕಾರ ಬಂಧಿಸಿ ದೇಶದ ಯಾವುದೋ ರಾಜ್ಯದ ಜೈಲಿನಲ್ಲಿ ಇರಿಸಿದೆ. ಬಂಧನದ ವಿಷಯವನ್ನು ಅವರ ಕುಟುಂಬದವರಿಗೂ ತಿಳಿಸಿಲ್ಲ ಎಂಬ ಮಾತು ಕೇಳಿ ಬಂದವು. ಎಚ್ಚೆತ್ತ ಸರ್ಕಾರ ಪ್ರಭುದೇವ ಅವರನ್ನು ಬಂಧಿಸಿಲ್ಲ ಎಂದು ಹೇಳಿಕೆ ನೀಡಿತು. ಆ ಹೇಳಿಕೆಗೆ ಟೀವಿಗಳಲ್ಲಿ ವ್ಯಾಪಕ ಪ್ರಚಾರ ಸಿಕ್ಕಿತು. ಹಾಗಾದರೆ ಪ್ರಭುದೇವ ಎಲ್ಲಿ? ಅವರು ದ್ವೇಷದ ರಾಜಕಾರಣಕ್ಕೆ ಬಲಿಯಾದರೇ?

ಪ್ರಭುತ್ವವನ್ನು ಟೀಕಿಸುವವರಿಗೆ ಉಳಿಗಾಲ ಇಲ್ಲ. ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ ಎಂಬ ಪ್ರಭುದೇವ ಅವರ ಮಾತುಗಳು ದೇಶದ ಉದ್ದಗಲದಲ್ಲಿ ಅನುರಣಿಸಿದವು!

‘ಪ್ರೊ.ಪ್ರಭುದೇವ ಮರೆವು ರೋಗಿ. ಅವರ ಪತ್ತೆಗೆ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಂಡಿದೆ. ಆದರೂ ಪ್ರತಿ ಪಕ್ಷಗಳು ಪಾದಯಾತ್ರೆಗೆ ಬೆಂಬಲ ನೀಡಿರುವುದು ದುರದೃಷ್ಟಕರ. ಮಾನಸಿಕ ರೋಗಿಯೊಬ್ಬನ ನಾಪತ್ತೆ ಪ್ರಕರಣದಲ್ಲಿ ರಾಜಕಾರಣ ಮಾಡಲು ಹೊರಟಿವೆ...’ ಎಂದು ಗೃಹ ಮಂತ್ರಿ ಹೇಳಿದರೆ, ಪಾದಯಾತ್ರೆಯನ್ನು ಕೈಬಿಟ್ಟು ಪ್ರಭುದೇವರ ಪತ್ತೆಗೆ ಸಹಕರಿಸಿ

